ಬ್ಯಾಕ್‌ಲಾಗ್ ಉಪನ್ಯಾಸಕರ ನೇಮಕಾತಿ

768 (1099) ಶ್ರೀ ಕುಮಾರಸ್ವಾಮಿ ಎಂ.ಪಿ (ಮೂಡಿಗೆರೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆದೇಶ ಸಂಖ್ಯೆ: ಇಡಿ 357 ಯುಪಿಸಿ 2002, ದಿನಾಂಕ: 19–12–2002 ರಂತೆ ಬ್ಯಾಕ್‌ಲಾಗ್‌ನಲ್ಲಿ ನೇಮಕ ಮಾಡಿಕೊಳ್ಳಲು ಇದುವರೆಗೆ ಉದ್ಭವಿಸಿದ ಉಪನ್ಯಾಸಕರ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು; (ಕಾಲೇಜುವಾರು ಮತ್ತು ವಿಷಯವಾರು ವಿವರ ನೀಡುವುದು)

ಆ) ಇಂತಹ ಖಾಲಿ ಹುದ್ದೆಗಳಿಗೆ ಬ್ಯಾಕ್‌ಲಾಗ್‌ನಲ್ಲಿ ನೇಮಕ ಮಾಡಲಾಗಿರುವ ಉಪನ್ಯಾಸಕರುಗಳ ಸಂಖ್ಯೆ ಎಷ್ಟು (ಕಾಲೇಜುವಾರು ಮತ್ತು ವಿಷಯವಾರು ವಿವರ ನೀಡುವುದು);

ಇ) ಈ ಖಾಲಿ ಹುದ್ದೆಗಳಿಗೆ ಬ್ಯಾಕ್‌ಲಾಗ್‌ನಲ್ಲಿ ಉಪನ್ಯಾಸಕರುಗಳನ್ನು ನೇಮಕ ಮಾಡದೆ ಇದರ ಕಾರ್ಯಭಾರವನ್ನು ಮರು ನಿಯೋಜನೆ ಮೂಲಕ ಬೇರೆ ವರ್ಗದ ಉಪನ್ಯಾಸಕರುಗಳಿಗೆ ನೀಡಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದೆ ಹಾಗೆ ಉಳಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ನಿಯಮ ಉಲ್ಲಂಘನೆ ಮಾಡಿದ ಅಧಿಕಾರಿಗಳ ಮೇಲೆ ಯಾವ ರೀತಿ ಕ್ರಮ ಜರುಗಿಸಲಾಗಿದೆ. ಇದುವರೆವಿಗೂ ಕ್ರಮ ತೆಗೆದು ಕೊಳ್ಳದಿದ್ದ ಪಕ್ಷದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಸರ್ಕಾರವು ಸಿದ್ದವಿದೆಯೇ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) : ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಮಂಜೂರಾಗಿರುವ ಉಪನ್ಯಾಸಕರ ಹುದ್ದೆಗಳ ಪೈಕಿ ಬ್ಯಾಕ್‌ಲಾಗ್‌ನಲ್ಲಿ ನೇಮಕ ಮಾಡಿಕೊಳ್ಳಲು ಇದುವರೆವಿಗೆ 256 ಹುದ್ದೆಗಳನ್ನು ಗುರುತಿಸಲಾಗಿದೆ. ಕಾರ್ಯಭಾರ ಉದ್ಭವಿಸಿದಾಗ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. (ಕಾಲೇಜುವಾರು ಮತ್ತು ವಿಷಯವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಬ್ಯಾಕ್‌ಲಾಗ್ ನೇಮಕ ಮಾಡಲಾಗಿರುವ ಉಪನ್ಯಾಸಕರ ಸಂಖ್ಯೆ–06 (ಕಾಲೇಜುವಾರು ಮತ್ತು ವಿಷಯವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ)

ಇ) ಸರ್ಕಾರದ ಪಾಲಿಸಿ ನಿಯಮಗಳ ಪ್ರಕಾರ ಮರು ನಿಯೋಜಿಸಿರುವ ಉಪನ್ಯಾಸಕರುಗಳನ್ನು ಬ್ಯಾಕ್‌ಲಾಗ್ ಹುದ್ದೆಗಳಿಗೆ ಎದುರಾಗಿ ಮರು ನಿಯೋಜನೆ ಮಾಡಿರುವುದಿಲ್ಲ. ಬ್ಯಾಕ್‌ಲಾಗ್ ಹುದ್ದೆಗಳನ್ನು ಕಾರ್ಯಭಾರ ಉದ್ಭವಿಸಿದಾಗ ನಿಯಮಾನುಸಾರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಸರ್ಕಾರದ ಪತ್ರ ಸಂಖ್ಯೆ: ಇಡಿ 106 ಯುಪಿಸಿ 2009, ದಿನಾಂಕ: 30-6-2009ರ ಪ್ರಕಾರ ಮರು ನಿಯೋಜನೆ ಮಾಡಿರುವುದರಿಂದ ಈ ಸಂಬಂಧವಾಗಿ ಯಾವುದೇ ನಿಯಮ ಉಲ್ಲಂಘನೆ ಆಗಿಲ್ಲದೆ ಇರುವುದರಿಂದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಶ್ನೆ : 1099ಕ್ಕೆ ಅನುಬಂಧ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಭರ್ತಿ ಮಾಡಲಾದ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭವಿಷ್ಯದಲ್ಲಿ ತುಂಬುವ ಕುರಿತು.

ಓದಲಾಗಿದೆ : ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ: ಕಾಶಿಆ-೯೦-ಖಾಕಾವಿ-೩೦-೨೦೦೨-೦೩ ದಿನಾಂಕ: ೧೬.೧೨.೨೦೦೨

ಪ್ರಸ್ತಾವನೆ :

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗಾಗಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದ್ದು ಮಂಜೂರಾದ ಖಾಲಿ ಹುದ್ದೆ ಅಥವಾ ನಿಗಧಿತ ಕಾರ್ಯಭಾರ ಇಲ್ಲದಿರುವ ಬೋಧಕ ವೃಂದದಲ್ಲಿ 256 ಬ್ಯಾಕ್‌ಲಾಗ್ ಹುದ್ದೆಗಳು ಹಾಗೂ ಮಂಜೂರಾದ ಹುದ್ದೆ ಇಲ್ಲದ ಹಾಗೂ ಅಗತ್ಯ ಕಾರ್ಯಭಾರ ಇಲ್ಲದ ಬೋಧಕೇತರ ವೃಂದದಲ್ಲಿ 397 ಹುದ್ದೆಗಳನ್ನು

ಪ್ರಸ್ತುತ ಸಂದರ್ಭದಲ್ಲಿ ಭರ್ತಿ ಮಾಡಲು ಸಾಧ್ಯವಿಲ್ಲದ ಪ್ರಯುಕ್ತ ಭವಿಷ್ಯದಲ್ಲಿ ಖಾಲಿ ಆಗಬಹುದಾದ ಎಲ್ಲಾ ಹುದ್ದೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಂದಲೇ ಭರ್ತಿ ಮಾಡಬೇಕಾಗಿರುವುದು ಅಗತ್ಯ ಕಂಡುಬಂದಿದೆ. ಈ ಸಂಬಂಧ ಮೇಲೆ ಓದಲಾದ ದಿನಾಂಕ: 16.12.2002ರ ಪತ್ರದಲ್ಲಿ ಕಾಲೇಜು ಶಿಕ್ಷಣ ಆಯುಕ್ತರಿಂದ ಬಂದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಬೋಧಕ ವೃಂದದಲ್ಲಿ ಪರಿಶಿಷ್ಟ ಜಾತಿಯವರಿಗಾಗಿ 158 ಹುದ್ದೆಗಳು ಪರಿಶಿಷ್ಟ ಪಂಗಡದವರಿಗಾಗಿ 98 ಹುದ್ದೆಗಳು ಹಾಗೂ ಬೋಧಕೇತರ ವೃಂದದಲ್ಲಿ ಪರಿಶಿಷ್ಟ ಜಾತಿಯವರಿಗಾಗಿ 174 ಹುದ್ದೆಗಳು, ಪರಿಶಿಷ್ಟ ಪಂಗಡದವರಿಗಾಗಿ 223 ಹುದ್ದೆಗಳನ್ನು ಕಾಯ್ದಿರಿಸಬೇಕಾಗಿದೆ. ಮೀಸಲಿರಿಸ ಬೇಕಾದ ಬ್ಯಾಕ್‌ಲಾಗ್ ಹುದ್ದೆಗಳ ಕಾಲೇಜುವಾರು ವಿವರ ಪಟ್ಟಿಯನ್ನು ಬೋಧಕ ವೃಂದಕ್ಕೆ ಸಂಬಂಧಿಸಿದಂತೆ ಅನುಬಂಧ–1 ರಲ್ಲಿಯೂ, ಬೋಧಕೇತರ ವೃಂದಕ್ಕೆ ಸಂಬಂಧಿಸಿದಂತೆ ಅನುಬಂಧ–2 ರಲ್ಲಿಯೂ ವವರಿಸಲಾಗಿದೆ. ಈ ಮಾಹಿತಿಗಳನ್ನು ಕಾಲೇಜುಗಳ ಆಡಳಿತ ಮಂಡಳಿಗಳು ಗಮನದಲ್ಲಿರಿಸಿ, ಇದಲ್ಲದೆ ಸ್ಪಾಪ್‌ಗ್ಯಾಪ್ ಉಪನ್ಯಾಸಕರುಗಳ ಸೇವೆಯನ್ನು ಸಕ್ರಮಗೊಳಿಸಲು 353 ಬ್ಯಾಕ್‌ಲಾಗ್ ಹುದ್ದೆಗಳನ್ನು ಬಳಸಲಾಗಿರುವುದರಿಂದ ಈ ಬ್ಯಾಕ್‌ಲಾಗ್‌ನ್ನು ಸಹ ತುಂಬಲು ಭವಿಷ್ಯದಲ್ಲಿ ಹಲವಾರು ಕಾರಣ ಗಳಿಂದಾಗಿ ಉದ್ಭವಿಸಬಹುದಾದ ಖಾಲಿ ಹುದ್ದೆಗಳಿಗೆ ಆದ್ಯತೆ ಮೇಲೆ ಭರ್ತಿ ಮಾಡತಕ್ಕದ್ದೆಂದು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ ೩೫೭ ಯುಪಿಸಿ ೨೦೦೨,
ದಿನಾಂಕ: ೧೯.೧೨.೨೦೦೨

ಪ್ರಸ್ತಾವನೆ ಭಾಗದಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಈ ಆದೇಶಕ್ಕೆ ಅನುಬಂಧಿಸಿ ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗಾಗಿ ಮೀಸಲಾಗಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಪ್ರಕಟಿಸಲಾಗಿದೆ. ಅವುಗಳ ಅಂಕಿಅಂಶ ಈ ಕೆಳಕಂಡಂತಿದೆ.

ಬೋಧಕ ವೃಂದ			ಬೋಧಕೇತರ ವೃಂದ		
ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
೧೫೮	೯೮	೨೫೬	೧೭೪	೨೨೩	೩೯೭

ಸ್ಟಾಪ್‌ಗ್ಯಾಪ್ ಉಪನ್ಯಾಸಕರುಗಳ ಸೇವೆಯನ್ನು ಸಕ್ರಮಗೊಳಿಸಲು ಖಾಲಿ ಲಭ್ಯವಿದ್ದ 353 ಬ್ಯಾಕ್‌ಲಾಗ್ ಹುದ್ದೆಗಳನ್ನು ಬಳಸಿಕೊಳ್ಳಲಾಗಿದೆ. ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ನೀಡಬೇಕಾಗಿರುವ ಬ್ಯಾಕ್‌ಲಾಗ್‌ನ್ನು ತುಂಬಲು ಹಾಗೂ ಮೇಲೆ ವಿವರಿಸಲಾಗಿರುವ 256+397=653 ಬ್ಯಾಕ್‌ಲಾಗ್ ಹುದ್ದೆಗಳನ್ನು ಹಾಗೂ 353 ಸ್ಟಾಪ್‌ಗ್ಯಾಪ್ ಸಕ್ರಮ ಗೊಳಿಸಿರುವ ಪೈಕಿ ಇರುವ ಬ್ಯಾಕ್‌ಲಾಗ್‌ನ್ನು ತುಂಬಲು ಭವಿಷ್ಯದಲ್ಲಿ ಯಾವುದೇ ಕಾರಣಗಳಿಂದಾಗಿ, ಉದಾಹರಣೆಗೆ, ನಿವೃತ್ತಿ ಬಡ್ತಿ, ರಾಜೀನಾಮೆ, ನಿಧನ, ಸ್ವಇಚ್ಛಾ ಹಾಗೂ ಕಡ್ಡಾಯ ನಿವೃತ್ತಿ ಕೆಲಸದಿಂದ ವಜಾ ಮಾಡುವುದರಿಂದ, ವರ್ಗಾವಣೆಯಿಂದ ಲಗತ್ತಿಸಿದ ಅನುಬಂಧ–1 ಹಾಗೂ 2ರ ಸಂಸ್ಥೆಗಳಲ್ಲಿ ಉದ್ಭವಿಸುವ ಖಾಲಿ ಹುದ್ದೆಗಳಿಗೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದು ಆದ್ಯತೆ ಮೇಲೆ ಆಯಾ ಆಡಳಿತ ಮಂಡಳಿಗಳು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಮಾತ್ರ ಭರ್ತಿ ಮಾಡಲು ಕ್ರಮ ಕೈಗೊಳ್ಳತಕ್ಕದೆಂದು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಬಸವರಾಜು)
ಸರ್ಕಾರದ ಅಪರ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಪ್ರತಿಗಳು :

1) ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು
2) ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು
3) ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
4) ಸಂಬಂಧಪಟ್ಟ ಖಾಸಗಿ ಅನುದಾನಿತ ಕಾಲೇಜುಗಳ ಎಲ್ಲಾ ಆಡಳಿತ ಮಂಡಳಿಯ ಅಧ್ಯಕ್ಷರು ಕಾರ್ಯದರ್ಶಿಗಳು ಮತ್ತು ಕಾಲೇಜುಗಳ ಪ್ರಾಂಶುಪಾಲರುಗಳಿಗೆ
5) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ

6) ಸರ್ಕಾರದ ಉಪ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, (ಪತ್ರ ಸಂಖ್ಯೆ:ಸಕಿ:64:ಎಸ್‌ಟಿಪಿ:2002 ದಿನಾಂಕ: 30.11.2002 ಮತ್ತು 13.12.2002ರ ಉಲ್ಲೇಖ ಮಾಹಿತಿಗಾಗಿ)
7) ಕಾರ್ಯದರ್ಶಿಯವರ ಆಪ್ತ ಸಹಾಯಕರು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
8) ಅಪರ ಕಾರ್ಯದರ್ಶಿಯವರ ಆಪ್ತ ಸಹಯಕರು, ಶಿಕ್ಷಣ ಇಲಾಖೆ
9) ಶಾಖಾ ರಕ್ಷಾ ಕಡತ : ಬಿಡಿ ಪ್ರತಿಗಳು

ಅನುಬಂಧ –1

ಆದೇಶ ಸಂಖ್ಯೆ:ಇಡಿ:357 ಯುಪಿಸಿ:2001, ದಿನಾಂಕ: 19–12–2002

ಬ್ಯಾಕ್‌ಲಾಗ್ ಹುದ್ದೆಗಳಲ್ಲಿ, ಮಂಜೂರಾದ ಖಾಲಿ ಹುದ್ದೆ, ನಿಗದಿತ ಕಾರ್ಯಭಾರವಿಲ್ಲದಿರುವ ಬಾಕಿ 256 ಬೋಧಕರ ಬ್ಯಾಕ್‌ಲಾಗ್ ಹುದ್ದೆಗಳ ಕಾಲೇಜುವಾರು ವಿವರ

ಬೆಂಗಳೂರು ವಿಭಾಗ

ಕ್ರ ಸಂ.	ಕಾಲೇಜಿನ ಹೆಸರು ಮತ್ತು ಸ್ಥಳ		ವಿಷಯ	ಲಭ್ಯವಿರುವ ಮಂಜೂರಾದ ಹುದ್ದೆಗಳು	
1		ಬಿ ಎಂ ಎಸ್ ಕಾಲೇಜು ಬೆಂಗಳೂರು	ರಸಾಯನಶಾಸ್ತ್ರ	ಎಸ್.ಸಿ	ಎಸ್.ಟಿ
			ಪ್ರಾಣಿಶಾಸ್ತ್ರ	1	0
2		ನ್ಯಾಷನಲ್ ಎಜುಕೇಷನ್ ಸೊಸೈಟಿ ಬೆಂಗಳೂರು	ಸಂಸ್ಕೃತ	1	1
			ಆಂಗ್ಲಭಾಷಾ	0	1
			ಅರ್ಥಶಾಸ್ತ್ರ	1	0
			ಸಸ್ಯಶಾಸ್ತ್ರ	1	0
3		ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಬೆಂಗಳೂರು	ಸಂಸ್ಕೃತ	1	1
			ಕನ್ನಡ	0	1
			ವಾಣಿಜ್ಯಶಾಸ್ತ್ರ	1	1
			ರಸಾಯನಶಾಸ್ತ್ರ	1	1
			ಸಸ್ಯಶಾಸ್ತ್ರ	1	1

			ಪ್ರಾಣಿಶಾಸ್ತ್ರ	1	1
4		ಎ ಪಿ ಎಸ್ ಕಾಲೇಜು ಬೆಂಗಳೂರು	ಕನ್ನಡ	1	1
5		ಭಗವಾನ್ ಬುದ್ಧ ಕಾಲೇಜು ಬೆಂಗಳೂರು	ರಾಜ್ಯಶಾಸ್ತ್ರ	1	0
6		ಎಂ ಇ ಎಸ್ ಕಾಲೇಜು ಬೆಂಗಳೂರು	ಆಂಗ್ಲಭಾಷಾ	1	1
			ಸಂಸ್ಕೃತ	1	0
			ಭೌತಶಾಸ್ತ್ರ	1	1
			ರಸಾಯನಶಾಸ್ತ್ರ	1	1
			ಸಸ್ಯಶಾಸ್ತ್ರ	1	0
			ಪ್ರಾಣಿಶಾಸ್ತ್ರ	1	1
			ಗಣಿತಶಾಸ್ತ್ರ	1	0
7		ವಿದ್ಯಾರ್ಥಕ ಕಾಲೇಜು ಬೆಂಗಳೂರು	ರಸಾಯನಶಾಸ್ತ್ರ	1	1
8		ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಕಾಲೇಜು ಬೆಂಗಳೂರು	ವಾಣಿಜ್ಯಶಾಸ್ತ್ರ	1	0
9		ಆರ್ ಬಿ ಎ ಎನ್ ಎಂ ಎಸ್ ಕಾಲೇಜು ಬೆಂಗಳೂರು	ಭೌತಶಾಸ್ತ್ರ	1	1
			ಗಣಿತಶಾಸ್ತ್ರ	1	0
			ವಾಣಿಜ್ಯಶಾಸ್ತ್ರ	1	0
10		ಎ ವಿ ಮರಂ ಕಾಲೇಜು ಬೆಂಗಳೂರು	ಕನ್ನಡ	1	1
			ಆಂಗ್ಲಭಾಷಾ	1	1
			ಅರ್ಥಶಾಸ್ತ್ರ	1	1
			ಸಮಾಜಶಾಸ್ತ್ರ	1	1
			ಇತಿಹಾಸ	1	0
11		ಎಸ್ ಜೆ ಆರ್ ಸಿ ಕಾಲೇಜು ಬೆಂಗಳೂರು	ಸಸ್ಯಶಾಸ್ತ್ರ	0	1
12		ಪಿ ಇ ಎಸ್ ಕಾಲೇಜು ಹನುಮಂತನಗರ ಬೆಂಗಳೂರು	ರಸಾಯನಶಾಸ್ತ್ರ	1	0

13		ವಿಜಯ ಕಾಲೇಜು ಬೆಂಗಳೂರು	ಸಸ್ಯಶಾಸ್ತ್ರ	1	0
			ರಸಾಯನಶಾಸ್ತ್ರ	2	0
			ಭೌತಶಾಸ್ತ್ರ	3	1
			ಪ್ರಾಣಿಶಾಸ್ತ್ರ	1	0
14		ಕಲ್ಪತರು ಕಾಲೇಜು ತಿಪಟೂರು	ಕನ್ನಡ	0	1
			ಅರ್ಥಶಾಸ್ತ್ರ	0	1
			ಪ್ರಾಣಿಶಾಸ್ತ್ರ	1	1
15		ಸಿದ್ಧಾರ್ಥ ಕಾಲೇಜು ತುಮಕೂರು	ರಸಾಯನಶಾಸ್ತ್ರ	1	0
			ವಾಣಿಜ್ಯ ಶಾಸ್ತ್ರ	1	0
16		ಕುವೆಂಪು ಕಾಲೇಜು ಚನ್ನಪಟ್ಟಣ	ಭೌತಶಾಸ್ತ್ರ	1	0
			ರಸಾಯನಶಾಸ್ತ್ರ	1	0
17		ಕೆ ಜಿ ಎಫ್ ಕಾಲೇಜು ಊರಿಗಾಂ ಕೆ ಜಿ ಎಫ್	ಭೌತಶಾಸ್ತ್ರ	2	0
			ರಸಾಯನಶಾಸ್ತ್ರ	1	0
			ಗಣಿತಶಾಸ್ತ್ರ	1	1
18		ಟಿ ಇ ಎಸ್ ಶಿಕ್ಷಣ ಸಂಸ್ಥೆ ಬೆಂಗಳೂರು	ಸಮಾಜಶಾಸ್ತ್ರ	1	0
				45	**26**
		ಮಂಗಳೂರು ವಿಭಾಗ			
19	1	ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಮಂಗಳೂರು	ಗಣಿತಶಾಸ್ತ್ರ	1	1
			ಪ್ರಾಣಿಶಾಸ್ತ್ರ	0	1
			ಸಂಸ್ಕೃತ	1	1
20	2	ಪೂರ್ಣಪ್ರಜ್ಞ ಕಾಲೇಜು ಉಡುಪಿ	ಆಂಗ್ಲಭಾಷಾ	1	0
			ಹಿಂದಿ	1	0
			ಇತಿಹಾಸ	1	0
				5	**3**
		ಧಾರವಾಡ ವಿಭಾಗ			
21	1	ಕೆ ಎಲ್ ಇ ವಿದ್ಯಾಸಂಸ್ಥೆ ಬೆಳಗಾಂ	ಆಂಗ್ಲಭಾಷಾ	1	0

			ವಾಣಿಜ್ಯ ಶಾಸ್ತ್ರ	0	1
			ಇತಿಹಾಸ	0	1
			ಭೂಗೋಳಶಾಸ್ತ್ರ	1	1
			ಭೌತಶಾಸ್ತ್ರ	2	1
			ರಸಾಯನಶಾಸ್ತ್ರ	0	2
			ಗಣಿತಶಾಸ್ತ್ರ	1	0
			ಮನಃಶಾಸ್ತ್ರ	1	0
22	2	ಬಿ ಎಲ್ ಡಿ ಇ ವಿದ್ಯಾ ಸಂಸ್ಥೆ ಬಿಜಾಪುರ	ಕನ್ನಡ	0	1
			ಹಿಂದಿ	0	1
			ಸಂಸ್ಕೃತ	1	1
			ಅರ್ಥಶಾಸ್ತ್ರ	0	1
			ಸಂಖ್ಯಾಶಾಸ್ತ್ರ	1	1
			ಭೌತಶಾಸ್ತ್ರ	2	1
			ರಸಾಯನಶಾಸ್ತ್ರ	0	1
			ಸಸ್ಯಶಾಸ್ತ್ರ	1	1
			ಪ್ರಾಣಿಶಾಸ್ತ್ರ	2	1
			ಗಣಿತಶಾಸ್ತ್ರ	0	1
	3	ಬಿ ವಿ ವಿ ಸಂಘ ಬಾಗಲಕೋಟಿ	ಕನ್ನಡ	0	1
			ಆಂಗ್ಲಭಾಷಾ	0	1
			ಹಿಂದಿ	1	0
			ಇತಿಹಾಸ	1	1
			ಅರ್ಥಶಾಸ್ತ್ರ	0	1
			ರಾಜ್ಯಶಾಸ್ತ್ರ	1	0
			ವಾಣಿಜ್ಯ ಶಾಸ್ತ್ರ	1	0
			ರಸಾಯನಶಾಸ್ತ್ರ	1	0
			ಸಸ್ಯಶಾಸ್ತ್ರ	1	0
24	4	ಜಿ ಇ ಎಸ್ ಎಜುಕೇಷನ್ ಸೊಸೈಟಿ ಗೋಕಾಕ್	ಭೌತಶಾಸ್ತ್ರ	1	1
			ರಸಾಯನಶಾಸ್ತ್ರ	1	1
			ಹಿಂದಿ	1	0
			ಸಮಾಜಶಾಸ್ತ್ರ	1	0

			ಸಸ್ಯಶಾಸ್ತ್ರ	1	0
			ಪ್ರಾಣಿಶಾಸ್ತ್ರ	1	0
25	5	ಎ ಎಸ್ ಎಸ್ ವಾಣಿಜ್ಯ ಕಾಲೇಜು ಗದಗ	ವಾಣಿಜ್ಯ ಶಾಸ್ತ್ರ	1	1
26	6	ಶಂಕರ ಕಾಲೇಜು ನವಲಗುಂದ	ಕನ್ನಡ	1	0
27	7	ಆರ್ ಎಲ್ ಲಾ ಕಾಲೇಜು ಬೆಳಗಾಂ	ಕಾನೂನು	1	0
28	8	ಜಿ ಜಿ ಡಿ ಕಲೆ/ವಿಜ್ಞಾನ/ ವಾಣಿಜ್ಯ ಕಾಲೇಜು ಬೈಲಹೊಂಗಲ	ಕನ್ನಡ	0	1
			ಆಂಗ್ಲಭಾಷಾ	1	0
			ಹಿಂದಿ	1	0
			ಸಮಾಜಶಾಸ್ತ್ರ	1	0
			ರಸಾಯನಶಾಸ್ತ್ರ	1	0
29	9	ವಿ ಎಂ ಎಸ್ ಆರ್ ಕಾಲೇಜು ಹುನಗುಂದ	ಕನ್ನಡ	0	1
30	10	ಕೆ ಎನ್ ವಿ ಕಾಲೇಜು ಕಿತ್ತೂರು ಬೆಳಗಾಂ	ಕನ್ನಡ	1	1
			ಇತಿಹಾಸ	1	0
			ವಾಣಿಜ್ಯ ಶಾಸ್ತ್ರ	1	0
31	11	ಎಸ್ ಡಿ ಎಂ ಕಾಲೇಜು ಹೊನ್ನಾವರ	ರಸಾಯನಶಾಸ್ತ್ರ	1	0
32	12	ಬಂಗೂರನಗರ ಕಾಲೇಜು ದಾಂಡೇಲಿ	ರಸಾಯನಶಾಸ್ತ್ರ	1	0
33	13	ಸಿ ಎಸ್ ಪಂಬಳಗಿ ಕಾಲೇಜು ಠಾಮದುರ್ಗ	ವಾಣಿಜ್ಯ ಶಾಸ್ತ್ರ	1	0
34	14	ಜೆ ಎಸ್ ಎಸ್ ಕಾಲೇಜು ಧಾರವಾಡ	ಸಂಸ್ಕೃತ	0	1
			ಭೌತಶಾಸ್ತ್ರ	0	1
			ರಸಾಯನಶಾಸ್ತ್ರ	1	1
			ಸಸ್ಯಶಾಸ್ತ್ರ	1	0
			ಪ್ರಾಣಿಶಾಸ್ತ್ರ	0	1

35	15	ಎಂ ಇ ಎಸ್ ಕಲಾ/ವಾಣಿಜ್ಯ ಕಾಲೇಜು ಮೂಡಲಗಿ	ರಾಜ್ಯಶಾಸ್ತ್ರ	1	0
36	16	ಎಸ್ ಎಂ ಭಂಡಾರಿ ಕಾಲೇಜು ಗುಳೇದಗುಡ್ಡ	ಸಮಾಜಶಾಸ್ತ್ರ	1	0
			ವಾಣಿಜ್ಯ ಶಾಸ್ತ್ರ	1	0
37	17	ಶಿವಾನಂದ ಕಾಲೇಜು ಕಾಗವಾಡ	ಅರ್ಥಶಾಸ್ತ್ರ	0	1
38	18	ಎಸ್ ವಿ ಎಂ ಕಾಲೇಜು ಇಳಕಲ್	ಅರ್ಥಶಾಸ್ತ್ರ	1	0
			ಸಮಾಜ ಶಾಸ್ತ್ರ	1	0
			ಭೌತಶಾಸ್ತ್ರ	1	0
			ರಸಾಯನಶಾಸ್ತ್ರ	1	0
			ಸಸ್ಯಶಾಸ್ತ್ರ	1	0
			ಗಣಿತಶಾಸ್ತ್ರ	1	0
39	19	ಅನ್ನದಾನೇಶ್ವರ ಕಾಲೇಜು ನರೇಗಲ್	ಇತಿಹಾಸ	1	0
			ಭೂಗೋಳಶಾಸ್ತ್ರ	1	0
			ಭೌತಶಾಸ್ತ್ರ	1	0
			ರಸಾಯನಶಾಸ್ತ್ರ	1	0
			ಸಸ್ಯಶಾಸ್ತ್ರ	1	0
40	20	ಮಹಾಂತಸ್ವಾಮಿ ಕಾಲೇಜು ಹಂಸಭಾವಿ	ಕನ್ನಡ	1	0
				55	31
		ಶಿವಮೊಗ್ಗ ವಿಭಾಗ			
41	1	ಎಸ್ ಜೆ ಎಂ ವಿದ್ಯಾಸಂಸ್ಥೆ ಚಿತ್ರದುರ್ಗ	ಅರ್ಥಶಾಸ್ತ್ರ	2	1
			ರಾಜ್ಯಶಾಸ್ತ್ರ	1	0
42	2	ರಾಷ್ಟ್ರೀಯ ವಿದ್ಯಾಸಂಸ್ಥೆ ಶಿವಮೊಗ್ಗ	ಅರ್ಥಶಾಸ್ತ್ರ	1	1
			ಇತಿಹಾಸ	1	0
			ವಾಣಿಜ್ಯ ಶಾಸ್ತ್ರ	0	1
			ಕನ್ನಡ	0	1
			ಕಾನೂನು	0	1

43	3	ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ ಚಿತ್ರದುರ್ಗ	ವಾಣಿಜ್ಯ ಶಾಸ್ತ್ರ	1	1
44	4	ಮಹಾರಾಜ ಮದಕರಿನಾಯಕ ಕಾಲೇಜು ಚಿತ್ರದುರ್ಗ	ಕನ್ನಡ	1	0
			ಆಂಗ್ಲಭಾಷಾ	1	1
			ಇತಿಹಾಸ	1	0
			ಅರ್ಥಶಾಸ್ತ್ರ	1	1
			ವಾಣಿಜ್ಯಶಾಸ್ತ್ರ	1	0
			ಕನ್ನಡ	1	0
			ಅರ್ಥಶಾಸ್ತ್ರ	1	0
			ರಾಜ್ಯಶಾಸ್ತ್ರ	0	1
			ಸಮಾಜಶಾಸ್ತ್ರ	0	1
			ಎಲೆಕ್ಟ್ರಾನಿಕ್ಸ್	1	1
				14	♦11
		ಗುಲ್ಬರ್ಗಾ ವಿಭಾಗ			
46	1	ಹೆಚ್ ಕೆ ಇ ಸಂಸ್ಥೆ	ಕನ್ನಡ	2	1
			ಅರ್ಥಶಾಸ್ತ್ರ	0	1
			ರಾಜ್ಯಶಾಸ್ತ್ರ	1	0
			ಸಮಾಜಶಾಸ್ತ್ರ	1	1
			ಗಣಿತಶಾಸ್ತ್ರ	1	0
			ಸಸ್ಯಶಾಸ್ತ್ರ	1	0
47	2	ವೀರಶೈವ ಕಾಲೇಜು ಬಳ್ಳಾರಿ	ಹಿಂದಿ	0	1
			ತೆಲುಗು	1	0
			ಅರ್ಥಶಾಸ್ತ್ರ	0	1
			ರಾಜ್ಯಶಾಸ್ತ್ರ	0	1
			ಭೌತಶಾಸ್ತ್ರ	4	1
			ರಸಾಯನಶಾಸ್ತ್ರ	3	1
48	3	ತಾರಾನಾಥ್ ಶಿಕ್ಷಣ ಸಂಸ್ಥೆ ರಾಯಚೂರು	ರಸಾಯನಶಾಸ್ತ್ರ	1	0
			ಗಣಿತಶಾಸ್ತ್ರ	1	0
			ಪ್ರಾಣಿಶಾಸ್ತ್ರ	1	1
			ಸಸ್ಯಶಾಸ್ತ್ರ	1	0
49	4	ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಬೀದರ್	ಕನ್ನಡ	1	0

			ರಸಾಯನಶಾಸ್ತ್ರ	1	0
			ಪ್ರಾಣಿಶಾಸ್ತ್ರ	1	0
			ಸಸ್ಯ ಶಾಸ್ತ್ರ	1	0
41	5	ಶರಣಬಸವೇಶ್ವರ ವಿದ್ಯಾಸಂಸ್ಥೆ	ಮನಃಶಾಸ್ತ್ರ	1	1
			ಎಲೆಕ್ಟ್ರಾನಿಕ್ಸ್	0	1
			ಶಿಕ್ಷಣ	1	0
			ಇತಿಹಾಸ	0	1
			ವಾಣಿಜ್ಯಶಾಸ್ತ್ರ	1	1
			ರಸಾಯನಶಾಸ್ತ್ರ	1	1
			ಸಸ್ಯಶಾಸ್ತ್ರ	0	1
42	6	ಗವಿಸಿದ್ದೇಶ್ವರ ಕಾಲೇಜು ಕೊಪ್ಪಳ	ಇತಿಹಾಸ	1	0
43	7	ನೃಪತುಂಗ ಕಾಲೇಜು ಸೇಡಂ	ಇತಿಹಾಸ	1	0
				28	**15**
		ಮೈಸೂರು ವಿಭಾಗ			
44	1	ಜೆ ಎಸ್ ಎಸ್ ವಿದ್ಯಾಸಂಸ್ಥೆ ಮೈಸೂರು	ಅರ್ಥಶಾಸ್ತ್ರ	1	0
			ರಾಜ್ಯ ಶಾಸ್ತ್ರ	0	1
			ಭೂಗೋಳಿಕ ಶಾಸ್ತ್ರ	0	1
			ಭೌತಶಾಸ್ತ್ರ	1	1
45	2	ಮಲ್ಲಮ್ಮ ಮರಿಯಲ್ಲಪ್ಪ ಕಾಲೇಜು ಮೈಸೂರು	ವಾಣಿಜ್ಯ ಶಾಸ್ತ್ರ	1	1
46	3	ಡಿ ಬನುಮಯ್ಯ ಕಾಲೇಜು ಮೈಸೂರು	ಕನ್ನಡ	0	1
			ಅರ್ಥಶಾಸ್ತ್ರ	1	1
47	4	ಶಾರದಾ ವಿಲಾಸ ಕಾಲೇಜು ಮೈಸೂರು	ಪ್ರಾಣಿ ಶಾಸ್ತ್ರ	1	1
			ರಸಾಯನಶಾಸ್ತ್ರ	1	0
48	5	ಆದಿಚುಂಚನಗಿರಿ ಕಾಲೇಜು ಚನ್ನರಾಯಪಟ್ಟಣ ಮೈಸೂರು	ರಾಜ್ಯಶಾಸ್ತ್ರ	1	0
			ಭೌತಶಾಸ್ತ್ರ	1	1

49	6	ಎ ವಿ ಕೆ ಕಾಲೇಜು ಹಾಸನ	ಕನ್ನಡ	0	1
			ಆಂಗ್ಲಭಾಷೆ	1	0
			ಇತಿಹಾಸ	1	0
			ಅರ್ಥಶಾಸ್ತ್ರ	1	1
50	7	ಪಿ ಇ ಎಸ್ ಕಾಲೇಜು ಮಂಡ್ಯ	ಭೌತಶಾಸ್ತ್ರ	0	1
51	8	ಭಾರತೀಯ ಕಾಲೇಜು ಕೆ ಎಂ ದೊಡ್ಡಿ	ಪ್ರಾಣಿಶಾಸ್ತ್ರ	0	1
				11	12

ಕಾಲೇಜು ಶಿಕ್ಷಣ ಇಲಾಖೆ

ಭವಿಷ್ಯಾವರ್ತಿಯಲ್ಲಿ ತುಂಬಬೇಕಾದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿರುವ ಬಗ್ಗೆ ವಿವರ (ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಎಂ.ಪಿ. ಕುಮಾರಸ್ವಾಮಿ, ಮೂಡಿಗೆರೆ ವಿಧಾನಸಭಾ ಕ್ಷೇತ್ರ ಇವರು ಪ್ರಶ್ನೆ ಸಂಖ್ಯೆ: 1099ಕ್ಕೆ ಉತ್ತರ

ಧಾರವಾಡ ವಿಭಾಗ

ಕ್ರ ಸಂ.	ಕಾಲೇಜಿನ/ ಸಂಸ್ಥೆಯ ಹೆಸರು	ವಿಷಯ	ಪ್ರವರ್ಗ	ನೇಮಕಾತಿಯ ಆದೇಶ ಸಂಖ್ಯೆ ಹಾಗೂ ದಿನಾಂಕ
1	ಅನ್ನದಾನೇಶ್ವರ ಕಾಲೇಜು, ನರೇಗಲ್	ಭೂಗೋಳಶಾಸ್ತ್ರ	ಪ.ಜಾ –01	ಕಾಶಿಆ:98:ಬ್ಯಾಕ್‌ಲಾಗ್: ಧಾವಿ:ಪಿಸಿಸಿ–2: 2008–09: ಬೆಂಗಳೂರು ದಿನಾಂಕ:25.06.2009
2	ಎಸ್.ವಿ.ಎಂ. ಕಾಲೇಜು, ಇಳಕಲ್,	ಅರ್ಥಶಾಸ್ತ್ರ	ಪ.ಜಾ –01	ಕಾಶಿಆ:43:ಬ್ಯಾಕ್‌ಲಾಗ್: ಧಾವಿ:ಪಿಸಿಸಿ–2: 2008–09: ಬೆಂಗಳೂರು ದಿನಾಂಕ: 04.03.2009
3	ಬಿ.ವಿ.ವಿ. ಸಂಘ, ಬಾಗಲಕೋಟೆ	ಸಸ್ಯಶಾಸ್ತ್ರ	ಪ.ಜಾ–01	ಕಾಶಿಆ–90–ಖಾಕಾವಿ–3/2002–03:ಖಾಕಾವಿ–2, ಬೆಂಗಳೂರು ದಿನಾಂಕ: 03.12.2008

4	ಬಿ.ಎಲ್.ಡಿ.ಇ. ವಿದ್ಯಾ ಸಂಸ್ಥೆ, ಬಿಜಾಪುರ.	ಸಂಖ್ಯಾ ಶಾಸ್ತ್ರ ದೈಹಿಕ ಶಿಕ್ಷಣ ಬೋಧಕರು	ಪ.ಜಾ–01 ಪ.ಜಾ–01	ಕಾಶಿಆ–90– ಖಾಕಾವಿ–3/2002–03, ಬೆಂಗಳೂರು ದಿನಾಂಕ: 01.10.2009
		ಅರ್ಥಶಾಸ್ತ್ರ	ಪ.ಜಾ–01	ಕಾಶಿಆ–90– ಖಾಕಾವಿ–2/ 2002–03, ಬೆಂಗಳೂರು ದಿನಾಂಕ: 07.07.2009
ಬೆಂಗಳೂರು/ಮೈಸೂರು/ಶಿವಮೊಗ್ಗ/ಮಂಗಳೂರು/ಗುಲ್ಬರ್ಗಾ ವಿಭಾಗ				
ಅಗತ್ಯ ಆರ್ಯಭಾರ ಇಲ್ಲದೆ ಇರುವುದರಿಂದ ಈವರೆವಿಗೂ ಗುರ್ತಿಸಲಾಗಿರುವ ಭವಿಷ್ಯದಲ್ಲಿ ತುಂಬಬೇಕಾದ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿರುವುದಿಲ್ಲ ಹಾಗೂ ಧಾರವಾಡ ವಿಭಾಗದಲ್ಲಿ ಇನ್ನೂ ಕೆಲವು ಹುದ್ದೆಗಳಿಗೆ ಅಗತ್ಯ ಕಾರ್ಯಭಾರ ಇಲ್ಲದಿರುವುದರಿಂದ ಹುದ್ದೆಗಳನ್ನು ತುಂಬಿರುವುದಿಲ್ಲ.				

ಮೀಸಲಿದ್ದ ಉಪನ್ಯಾಸಕರ ನೇಮಕಾತಿ

769 (1100) ಶ್ರೀ ಕುಮಾರಸ್ವಾಮಿ ಎಂ.ಪಿ (ಮೂಡಿಗೆರೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಅನುದಾನಿತ ಬಿ.ಎಂ.ಎಸ್. ಮಹಿಳಾ ಪದವಿ ಕಾಲೇಜು, ಬೆಂಗಳೂರು, ಇಲ್ಲಿ ಪರಿಶಿಷ್ಟ ಜಾತಿಗೆ ಮೀಸಲಿದ್ದ ಉಪನ್ಯಾಸಕರ ಹುದ್ದೆ ಖಾಲಿ ಇದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಕರೆದ, ಆಯ್ಕೆ ಸಮಿತಿಯಿಂದ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಗೆ 08 ತಿಂಗಳಾದರೂ ಅನುಮೋದನೆ ನೀಡದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನೇಮಕಾತಿ ಹಂತದಲ್ಲಿ ಸದರಿ ಹುದ್ದೆಗೆ ಲಭ್ಯವಿದ್ದ ಕಾರ್ಯಭಾರವನ್ನು ಬೇರೆ ಮಾರ್ಗದಲ್ಲಿ ನೇಮಕ ಮಾಡಲಾಗಿರುವ ಉಪನ್ಯಾಸಕರಿಗೆ ವರ್ಗ ಮಾಡಿ ಪರಿಶಿಷ್ಟ ಜಾತಿಯ ಅಭ್ಯರ್ಥಿಯ ನೇಮಕಾತಿಯನ್ನು ತಿರಸ್ಕರಿಸುವುದು ಸರಿಯಾದ ಕ್ರಮವೆ, ಇದು ಮೀಸಲಾತಿಯ ನಿಯಮ ಉಲ್ಲಂಘನೆ ಮಾಡಿದಂತಾಗುವುದಿಲ್ಲವೆ;